No. of Printed Pages : 5

**7753**

*Register Number* | | | | | | | |

# Language – Part IV – KANNADA

Time Allowed : 3.00 Hours ]   [ Maximum Marks : 100

**ಸೂಚನೆಗಳು :** (1) ಪ್ರಶ್ನೆ ಪತ್ರಿಕೆಯ ಮುದ್ರಣ ಸ್ಪಷ್ಟವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ಪಷ್ಟತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿರಿ.

(2) ಉತ್ತರವನ್ನು ಬರೆಯಲು **ಕಪ್ಪು** ಅಥವಾ **ನೀಲಿ** ಶಾಯಿಯನ್ನು ಉಪಯೋಗಿಸಿರಿ.

## ಭಾಗ – I

**(15 ಅಂಕಗಳು)**

**ಸರಿಯಾದ** ಉತ್ತರವನ್ನು ಆರಿಸಿ ಬರೆಯಿರಿ. **15x1=15**

Choose and write the **correct** answer.

1. ಕನ್ನಡ ಸಾಹಿತ್ಯದ ರತ್ನತ್ರಯರಲ್ಲಿ ಒಬ್ಬರು :
(ಅ) ರನ್ನ (ಆ) ಬಸವಣ್ಣ (ಇ) ಕುಮಾರವ್ಯಾಸ (ಈ) ಹರಿಹರ

2. ಗಂಗೆಯನ್ನು – ಪದದಲ್ಲಿರುವ ವಿಭಕ್ತಿ ಪ್ರತ್ಯಯ :
(ಅ) ಪ್ರಥಮ (ಆ) ದ್ವಿತೀಯ (ಇ) ತೃತೀಯ (ಈ) ಚತುರ್ಥಿ

3. ಸ್ವತಂತ್ರವಾಗಿ ಉಚ್ಚಾರ ಮಾಡುವ ಅಕ್ಷರಗಳನ್ನು ___________ ಎನ್ನುತ್ತೇವೆ.
(ಅ) ವ್ಯಂಜನಗಳು (ಆ) ಸ್ವರಗಳು (ಇ) ಯೋಗವಾಹಗಳು (ಈ) ಅನುನಾಸಿಕಗಳು

4. ಕವಿ ರಾಘವಾಂಕನ ವಾಸಸ್ಥಳ :
(ಅ) ಬೇಲೂರು (ಆ) ಹಳೇಬೀಡು (ಇ) ಹಂಪೆ (ಈ) ತಲಕಾಡು

5. ಅಂಕಿತನಾಮಕ್ಕೆ ಒಂದು ಉದಾಹರಣೆ :
(ಅ) ವಿದ್ಯಾರ್ಥಿ (ಆ) ಹಿಮಾಲಯ (ಇ) ದೇಶ (ಈ) ರೋಗಿ

6. ಹೇಮಂತ ಎಂಬುದು ಒಂದು :
(ಅ) ಋತು (ಆ) ವರ್ಷ (ಇ) ಮಾಸ (ಈ) ನಕ್ಷತ್ರ

7. ಕಥೆ, ಕವನ, ಕಾದಂಬರಿ, ನಾಟಕ, ಕಾವ್ಯ ಮುಂತಾದವು :
(ಅ) ಸಾಹಿತ್ಯ ಪ್ರಕಾರಗಳು (ಆ) ವ್ಯಾಕರಣ ಪ್ರಕಾರಗಳು
(ಇ) ಛಂದಸ್ಸಿನ ಪ್ರಕಾರಗಳು (ಈ) ಅಲಂಕಾರ ಪ್ರಕಾರಗಳು

[ Turn over

https://www.tamilnaduboard.com

8. ಓಡಿ ಹೋದನು – ಎಂಬುದು __________ ಕಾಲಕ್ಕೆ ಉದಾಹರಣೆ.
(ಅ) ಭೂತಕಾಲ (ಆ) ವರ್ತಮಾನ ಕಾಲ (ಇ) ಭವಿಷತ್ ಕಾಲ (ಈ) ಋತು ಕಾಲ

9. ಕನ್ನಡ ಸಾಹಿತ್ಯದ ಪ್ರಪ್ರಥಮ ಕವಯಿತ್ರಿ :
(ಅ) ಅಕ್ಕಮಹಾದೇವಿ (ಆ) ಸಂಚಿ ಹೊನ್ನಮ್ಮ (ಇ) ಅತ್ತಿಮಬ್ಬೆ (ಈ) ಅನುಪಮ ನಿರಂಜನ

10. 'ಮಾಡಿದ್ದುಣ್ಣೋ ಮಾರಾಯ' ಎಂಬುದು ಒಂದು :
(ಅ) ಒಗಟು (ಆ) ನುಡಿಗಟ್ಟು (ಇ) ನಾಣ್ನುಡಿ (ಈ) ದ್ವಿರುಕ್ತಿ

11. ವೃದ್ಧಿಸಂಧಿಗೆ ಒಂದು ಉದಾಹರಣೆ :
(ಅ) ಸುರೇಂದ್ರ (ಆ) ಏಕೈಕ (ಇ) ಕವೀಂದ್ರ (ಈ) ಕಂಬನಿ

12. 'ನಡೆದಾಡುವ ವಿಶ್ವಕೋಶ' ಎಂಬ ಬಿರುದಾಂಕಿತರಾದವರು :
(ಅ) ಡಾ|| ಶಿವರಾಮ ಕಾರಂತ (ಆ) ಡಿ.ಎಲ್.ಎನ್.
(ಇ) ಕೆ.ಎಸ್.ನ. (ಈ) ಬಿ.ಎಂ.ಶ್ರೀ.

13. ಭಾಮಿನಿ ಷಟ್ಪದಿಯಲ್ಲಿ ಕಾವ್ಯವನ್ನು ರಚಿಸಿದ ಮಹಾಕವಿ :
(ಅ) ಕುಮಾರವ್ಯಾಸ (ಆ) ಪಂಪ (ಇ) ಲಕ್ಷ್ಮೀಶ (ಈ) ವ್ಯಾಸ ಮಹರ್ಷಿ

14. ಪದ್ಯಗಳ ನಿಯಮಗಳನ್ನು ತಿಳಿಸುವ ಶಾಸ್ತ್ರ :
(ಅ) ವ್ಯಾಕರಣ (ಆ) ಛಂದಸ್ಸು (ಇ) ಅಲಂಕಾರ (ಈ) ವರ್ಣಮಾಲೆ

15. ಇವರು ಕನ್ನಡ ಸಾಹಿತ್ಯದಲ್ಲಿ ರಾಷ್ಟ್ರಕವಿ ಎಂದು ಬಿರುದಾಂಕಿತರಾದವರು :
(ಅ) ಗೋವಿಂದ ಪೈ (ಆ) ಗಿರೀಶ್ ಕಾರ್ನಾಡ್
(ಇ) ಯು.ಆರ್. ಅನಂತಮೂರ್ತಿ (ಈ) ವಿ.ಕೃ. ಗೋಕಾಕ್

## ಭಾಗ – II
### (18 ಅಂಕಗಳು)
### ವಿಭಾಗ – 1

ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಉತ್ತರಿಸಿರಿ. 4x2=8
Answer **any four** questions.

16. ಪುಲಿಗೆರೆಯ ಸೋಮೇಶ್ವರನು ಹೇಳಿದ ಮಾತುಗಳೇನು ?

17. ರೇಷ್ಮೆ ಬಟ್ಟೆಯನ್ನು ಪ್ರಾಚೀನ ಕಾಲದಲ್ಲಿ ಯಾರು ಧರಿಸುತ್ತಿದ್ದರು ?

18. ಅಭಯರುಚಿ ಮತ್ತು ಅಭಯಮತಿ ಯಾರು ?

https://www.tamilnaduboard.com

19. ಸಳನು ಯಾರ ಬಳಿ ಜ್ಞಾನ ಸಂಪಾದನೆ ಮಾಡಿದನು ?

20. ಬಸವಣ್ಣನವರು ಕಟ್ಟ ಬಯಸಿದ ಸಮಾಜ ಯಾವ ತಳಹದಿಯ ಮೇಲೆ ರೂಪುಗೊಂಡಿದೆ ?

21. ಬೂಟ್ ಪಾಲಿಶ್ ಹುಡುಗನ ಗುರಿ ಏನು ?

### ವಿಭಾಗ – 2

ಈ ಕೆಳಕಂಡ ಪ್ರಶ್ನೆಗಳಲ್ಲಿ **ಯಾವುದಾದರೂ ಐದಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿರಿ. 5x2=10

Answer **any five** questions briefly.

22. 'ಬಿದ್ದವನನ್ನು ಹೊಡೆಯೆನು' ಎಂದು ದುರ್ಯೋಧನನು ಏನು ಮಾಡಿದನು ?

23. ಕೆಟ್ಟೆಂ ಕೆಟ್ಟೆನೆಂದು ಸಿದ್ಧರಾಮನು ಏಕೆ ಚಿಂತಿಸಿದನು ?

24. ಹೇಮಂತ ಋತು ಬರುವಾಗ ಇಳೆ ಹೇಗಿರುತ್ತದೆ ?

25. ಹುತ್ತರಿ ಹಬ್ಬದಲ್ಲಿ ಕೊಡಗರು ಎಂತಹ ಉಡುಪನ್ನು ಧರಿಸುತ್ತಾರೆ ?

26. ಅಲ್ಲಮಪ್ರಭುಗಳು ಲೋಕವು ಯಾವುದಕ್ಕಾಗಿ ಸತ್ತಿತೆಂದು ಹೇಳುತ್ತಾರೆ ?

27. ಅರಮನೆಯ ಮಹಾಸಭೆಯು ಹೇಗೆ ಕಂಗೊಳಿಸುತ್ತಿತ್ತು ?

28. ಕೆಂದಾವರೆ, ತಲೆಬಾಗು – ಈ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸವನ್ನು ಹೆಸರಿಸಿ.

## ಭಾಗ – III

**(18 ಅಂಕಗಳು)**

ಈ ಕೆಳಕಂಡ ಪ್ರಶ್ನೆಗಳಲ್ಲಿ ಪ್ರತಿ ವಿಭಾಗದಿಂದ **ಯಾವುದಾದರೂ ಎರಡು** ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿರಿ. (**34**ನೇ ಪ್ರಶ್ನೆ **ಕಡ್ಡಾಯ.**)

Answer **any two** questions from each section. (Question No. **34** is **compulsory**.)

### ವಿಭಾಗ – 1 2x3=6

29. ಚಂಡಮಾರಿಯು ಯಾರು ? ಇವಳ ವಿಶೇಷತೆಯೇನು ?

30. ತಾಯ್ನಾಡಿನ ಬಗ್ಗೆ ಲೇಖಕರು ಏನೆಂದಿದ್ದಾರೆ ?

31. ಮಳೆ ಪ್ರಾರಂಭವಾದಾಗ ಜನರು ಹೇಗೆ ಹಿಗ್ಗಿದರು ?

[ Turn over

https://www.tamilnaduboard.com

### ವಿಭಾಗ – 2

2x3=6

32. ಗುರು–ಶಿಷ್ಯ ಸಂಬಂಧವನ್ನು ಬಸವಣ್ಣನವರು ಹೇಗೆ ವಿವರಿಸಿದ್ದಾರೆ ?

33. ಮಯನು ನಿರ್ಮಿಸಿದ ಅರಮನೆಯ ವೈಭವವನ್ನು ವರ್ಣಿಸಿರಿ.

34. ಈ ಪದ್ಯಭಾಗವನ್ನು ಪೂರ್ಣಗೊಳಿಸಿ.
Quote from Memory.
(ಅ) ಗುರು–ಶಿಷ್ಯ ಸಂಬಂಧ ...............................
......................... ನಮ್ಮ ಕೂಡಲ ಸಂಗಮದೇವ

**ಅಥವಾ**

(ಆ) ಹೇಮಂತ ..............................................
.................................. ತರುವ ಮಾರುತನಿಲ್ಲ

### ವಿಭಾಗ – 3

2x3=6

35. ಆದೇಶ ಸಂಧಿಯ ಲಕ್ಷಣ ಬರೆದು, ಉದಾಹರಣೆ ನೀಡಿರಿ.

36. ತತ್ಪುರುಷ ಸಮಾಸದ ಸೂತ್ರ ಬರೆದು, ಎರಡು ಉದಾಹರಣೆ ನೀಡಿರಿ.

37. ಆ ಮಹಾಸಭೆ ದೇವ ನಿರ್ಮಿತ
ರಾಮಣೀಯಕ ವಿವಿಧ ರತ್ನ
ಸ್ತೋಮ ತೇಜಃ ಪುಂಜ ಭಂಜಿತ ನಯನ ವೀಧಿಯಲಿ
ಈ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಮಾತ್ರೆಗಳ ಸಂಖ್ಯೆಯನ್ನು ತಿಳಿಸಿ.

## ಭಾಗ – IV

**(25 ಅಂಕಗಳು)**

ಕೊಟ್ಟಿರುವ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿರಿ. 5x5=25
Answer **all** the questions.

38. (ಅ) ವಸಂತ ಕಾಲದ ವರ್ಣನೆಯನ್ನು ವಿವರಿಸಿ.

**ಅಥವಾ**

(ಆ) ಭಾರತೀಯ ಕುಟುಂಬ ವ್ಯವಸ್ಥೆಯ ಬಗ್ಗೆ ವಿವರಿಸಿ.

39. (ಅ) ಕವಿ ಪಂಪನು ತನ್ನ ದೇಶಾಭಿಮಾನವನ್ನು ಹೇಗೆ ವರ್ಣಿಸಿದ್ದಾನೆ ?

**ಅಥವಾ**

(ಆ) ನಿಜವಾದ ವ್ಯಾಸಂಗ ಹೇಗಿರಬೇಕೆಂದು ಲೇಖಕರು ಹೇಳುತ್ತಾರೆ ?

https://www.tamilnaduboard.com

40. ನಿಮ್ಮ ಊರಿಗೆ ಬಸ್‌ಗಳ ವ್ಯವಸ್ಥೆಯನ್ನು ಕಲ್ಪಿಸಿ ಕೊಡುವಂತೆ ಕೋರಿ, ಸಾರಿಗೆ ಆಯುಕ್ತರಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಶಾಲೆಯಿಂದ ಹೋಗುವ ಶೈಕ್ಷಣಿಕ ಪ್ರವಾಸಕ್ಕೆ ಹಣ ಕಳುಹಿಸುವಂತೆ ಕೋರಿ, ನಿಮ್ಮ ತಂದೆಗೊಂದು ಪತ್ರ ಬರೆಯಿರಿ.

41. 'ಮನಸ್ಸಿದ್ದರೆ ಮಾರ್ಗ' – ಈ ಗಾದೆಮಾತು ನೀಡುವ ಅರ್ಥವನ್ನು ವಿವರಿಸಿ.

42. (ಅ) ಬೇಸಿಗೆಯ ಬಿರುಬಿಸಿಲು – ಕಾಗೆಯೊಂದು ನೀರಿಗಾಗಿ ........ ಕೊಡದ ಅಡಿಯಲ್ಲಿ ........ ನೀರು ........ ಕಲ್ಲುಗಳನ್ನು ಆಯ್ದು ........ ಈ ಕಥಾಭಾಗವನ್ನು ಪೂರ್ಣಗೊಳಿಸಿ.

**ಅಥವಾ**

(ಆ) ಈ ಆಂಗ್ಲ ಗಾದೆಗಳಿಗೆ ಸರಿಯೊಂದುವ ಕನ್ನಡ ಗಾದೆಮಾತನ್ನು ಬರೆಯಿರಿ.

(i) Work is worship
(ii) No pain no gain
(iii) Health is wealth
(iv) Barking dog seldom bite
(v) Unity is strength

## ಭಾಗ – V
**(24 ಅಂಕಗಳು)**

ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ. **3x8=24**

Answer the following questions in detail.

43. (ಅ) ದೇಶಾಭಿಮಾನದ ಸ್ಪಂದನವು 'ನಾವೆಲ್ಲರೂ ಒಂದೇ ಜಾತಿ' ಎಂಬ ಕವನದಲ್ಲಿ ಹೇಗೆ ಮೂಡಿ ಬಂದಿದೆ ?

**ಅಥವಾ**

(ಆ) ಸ್ತ್ರೀ–ಪುರುಷ ಸಮಾನತೆ ಮತ್ತು ಏಕದೇವೋಪಾಸನೆಗಳ ಬಗ್ಗೆ ಬಸವಣ್ಣನವರ ಅಭಿಪ್ರಾಯವೇನು ?

44. (ಅ) ತಲಕಾಡು ಮರಳುಮಯವಾಗಲು ವಾಸ್ತವ ಕಾರಣವೇನು ?

**ಅಥವಾ**

(ಆ) ದೇವತೆಯು ಯಾರಿಗೆ, ಯಾವ ಶಾಪವನ್ನು ನೀಡಿದ್ದಳು ? ಏಕೆ ?

45. ಈ ಕೆಳಕಂಡ ವಿಷಯಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಪ್ರಬಂಧ ರಚಿಸಿ.

(ಅ) ನನ್ನ ದೇಶ – ನಮ್ಮ ಹೆಮ್ಮೆ
(ಆ) ನಿಮ್ಮ ಮೆಚ್ಚಿನ ವಿಜ್ಞಾನಿ

- o O o -

https://www.tamilnaduboard.com